## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **S.C. No**. 268/2021

**ಸಾಕ್ಷಿಯನ್ನು ದಿನಾಂಕ 12.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಿ.ರಮೇಶ್ | ಪಿ.ಡಬ್ಲ್ಯೂ-13 |
| ತಂದೆಯ/ಗಂಡನ ಹೆಸರು | : | ಪುಟ್ಟಸ್ವಾಮಿಗೌಡ | ಸಿ.ಡಬ್ಲ್ಯೂ-25 |
| ವಯಸ್ಸು | : | 51 | |
| ಉದ್ಯೋಗ | : | ಮುಖ್ಯ ಆರಕ್ಷಕರು,<br>ಟಿ.ನರಸೀಪುರ ಪೋಲಿಸ್ ಠಾಣೆ | |
| ವಾಸ ಸ್ಥಳ | : | ಟಿ.ನರಸೀಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2019 ರಿಂದ ಟಿ.ನರಸೀಪುರ ಪೋಲಿಸ್ ಠಾಣೆಯಲ್ಲಿ ಮುಖ್ಯ ಆರಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 28.8.2021 ರಂದು ಕ್ರೈಂ ನಂ.290/2021 ರ ಪ್ರಕರಣದಲ್ಲಿನ ಆರೋಪಿ ಪತ್ತೆಗಾಗಿ ಪಿ.ಎಸ್.ಐ ಮಂಜು, ನನ್ನನ್ನು ಹಾಗೂ ಪಿ.ಸಿ 601 ಮಾದೇಶ ಇವರನ್ನು ಪಿ.ಐ ಕೃಷ್ಣಪ್ಪ ಇವರು ನೇಮಿಸಿದ್ದರು.ಆ ದಿನ ನಾವು ಹೊಸಹೊಳ್ಳಿ, ಹೊಸಹಳ್ಳಿ ಮೋಳೆ, ಮೂಗೂರು, ಮಾಡ್ರಹಳ್ಳಿ ಹಾಗೂ ಕುರುಬೂರ ಮುಂತಾದ ಕಡೆ ಹುಡುಕಾಡಿದಾಗ ನಮಗೆ ಮಾಹಿತಿ ದೊರಕಿರಸಲಿಲ್ಲ. ದಿನಾಂಕ 31.8.2021 ರಂದು ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ಆ ದಿನ ಮಧ್ಯಾಹ್ನ 1.30 ಕ್ಕೆ ಮೂಗೂರು ಬಸ್ ನಿಲ್ದಾಣದ

ಬಳಿ ಆರೋಪಿ ಮಹೇಶಕುಮಾರನನ್ನು ವಶಕ್ಕೆ ಪಡೆದು ಮದ್ಯಾಹ್ನ 2.15 ಕ್ಕೆ ಪಿ.ಐ ಕೃಷ್ಣಪ್ಪ ಇವರ ಮುಂದೆ ಹಾಜರುಪಡಿಸಿದೆವು. ಆ ಬಗ್ಗೆ ಪಿ.ಎಸ್.ಐ ಮಂಜು ಇವರು ವರದಿ ನೀಡಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ನಾವು ವಶಕ್ಕೆ ಪಡೆದ ಆರೋಪಿ ಇರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎ ವಕೀಲರಿಂದಃ**

ಆರೋಪಿಯನ್ನು ವಶಕ್ಕೆ ಪಡೆದಾಗ ನಾನು ಮುಖ್ಯ ಆರಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನನ್ನನ್ನು ಆರೋಪಿ ಪತ್ತೆಗಾಗಿ ನೇಮಿಸಿದ ಬಗ್ಗೆ ಮೌಖಿಕವಾಗಿ ತಿಳಿಸಿದ್ದರು, ಆದರೆ ಲಿಖಿತ ಆದೇಶ ನೀಡಿರುವುದಿಲ್ಲ. ಆ ದಿನ ನಾವು ಕರ್ತವ್ಯ ಮಾಡಿದ ಬಗ್ಗೆ ಇನ್ಸಪೆಕ್ಟರ್ ಡೈರಿಯಲ್ಲಿ ನಮೂದು ಮಾಡಿರುತ್ತಾರೆ. ಆರೋಪಿ ಮುಗೂರಿನವರು ಎಂದು ನಮಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಆರೋಪಿ ಮೂಗೂರಿನ ಖಾಯಂ ವಾಸಿ ಎಂದರೆ ಆರೋಪಿ ವಶಕ್ಕೆ ಪಡೆದಾಗ ಗೊತ್ತಾಗಿದೆ. ನಾವು ತನಿಖಾಧಿಕಾರಿಗೆ ಸಹಾಯ ಮಾಡಲು ಆರೋಪಿ ಬಸ್ ನಿಲ್ದಾಣದ ಬಳಿ ಇದ್ದಾಗ ವಶಕ್ಕೆ ಪಡೆದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಮನೆಯಿಂದ ಕರೆದುಕೊಂಡು ಹೋಗಿ ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು